ಉ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಅಗತ್ಯಕ್ಕೆ ಅನುಗುಣವಾಗಿ ಸ್ವಯಂ ಸೇವಾ ಸಂಸ್ಥೆಗಳ ಮುಖೇನ ಶಿಕ್ಷಕರ ಸೇವೆಯನ್ನು ಪಡೆದುಕೊಳ್ಳುವ ಅಧಿಕಾರ ನೀಡಲಾಗಿದೆ.

ಊ) ಜಿಲ್ಲಾ ವ್ಯಾಪ್ತಿಯಲ್ಲಿರುವ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಶಿಕ್ಷಕರ ಸೇವೆಯನ್ನು ಪಡೆದುಕೊಂಡಿದ್ದು ಇದರಿಂದ ಸ್ಥಳೀಯರಿಗೆ ಹಾಗೂ ಅರ್ಹತೆ ಇಲ್ಲದವರಿಗೆ ಅವಕಾಶ ಕಲ್ಪಿಸದೇ ಇರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ಎ) ಉದ್ಭವಿಸುವುದಿಲ್ಲ.

5104 (6108) ಶ್ರೀ ಬಸವರಾಜು ಹೆಚ್. ಡಿ. (ಏರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇತ್ತೀಚಿನ ಪಟ್ಟಣ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶ ವಿದ್ಯಾರ್ಥಿ ನಿಯಲಗಳಿಗೆ ವಿದ್ಯಾರ್ಥಿಗಳು ಹೆಚ್ಚಾಗಿ ಅರ್ಜಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಲ್ಲಿ ಬಹುತೇಕ ಬಡವರು ಹಾಗೂ ಪರಿಶಿಷ್ಟ ಜಾತಿ, ವರ್ಗಗಳಿಗೆ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಇವರಿಗೆ ಅನುಕೂಲ ಕಲ್ಪಿಸುವುದು ಸರ್ಕಾರದ ಜವಾಬ್ದಾರಿ ಅಲ್ಲವೇ;

ಈ) ಹಾಗಿದ್ದಲ್ಲಿ, ಸೀಟುಗಳನ್ನು ಹೆಚ್ಚಳ ಮಾಡಿ ಮಕ್ಕಳನ್ನು ಸೇರಿಸಲು ಈ ವರ್ಷದಿಂದಲೇ ಆದೇಶ ಹೊರಡಿಸಲಾಗುವುದೇ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಹೌದು,

ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಕ್ಕಾಗಿ ಹೆಚ್ಚಿನ ಅರ್ಜಿಗಳು ಬರುತ್ತಿವೆ.

ಆ) ಹೌದು.

ಇ) ಹೌದು.

ಈ) 2005–06ನೇ ಸಾಲಿನಲ್ಲಿ ಸಂಖ್ಯಾಬಲ ಹೆಚ್ಚಳಕ್ಕಾಗಿ ಹೆಚ್ಚುವರಿ ಆಯವ್ಯಯ ಲಭ್ಯತೆ ಆಧರಿಸಿ ಪರಿಶೀಲಿಸಲಾಗುವುದು.

5105 (6109) ಶ್ರೀ ಬಸವರಾಜು ಹೆಚ್. ಡಿ. (ಏರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಹಾಗೂ ಯೋಜನಾ ಸಮನ್ವಯ ಅಧಿಕಾರಿಗಳ ಹುದ್ದೆಗಳಲ್ಲಿ ಇತರೇ ಇಲಾಖೆಗಳಿಂದ ಹಾಗೂ ಕೇಂದ್ರ ಸರ್ಕಾರದ ಎರವಲು ಸೇವೆ ಮೇಲೆ ರಾಜ್ಯಾದ್ಯಂತ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಎಷ್ಟು;

ಆ) ಇವರುಗಳ ಮಾತೃ ಇಲಾಖೆಗಳು ಯಾವುವು;

ಇ) ಈ ಇಲಾಖೆಗೆ ಇಂತಹ ಎರವಲು ಸೇವೆ ಅವಶ್ಯಕತೆ ಇದೆಯೇ;

ಈ) ಹಾಗಿದ್ದಲ್ಲಿ ಇಲಾಖೆಯಲ್ಲಿ ಅಧಿಕಾರಿಗಳ ಕೊರತೆ ಇದೆಯೇ;

ಉ) ಇದ್ದರೆ ಎಷ್ಟು;

ಊ) ಕೊರತೆ ಇರಲು ಕಾರಣವೇನು;

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಎರವಲು ಸೇವೆಯ ಮೇಲೆ ರಾಜ್ಯಾದ್ಯಂತ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ ಕೆಳಕಂಡಂತಿದೆ:–

1) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ವೃಂದ–10 (ರಾಜ್ಯ ಸರ್ಕಾರದ ಅನ್ಯ ಇಲಾಖೆಯ ಅಧಿಕಾರಿಗಳು)
2) ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ವೃಂದ–01 (ರಾಜ್ಯ ಸರ್ಕಾರದ ಅನ್ಯ ಇಲಾಖೆಯ ಅಧಿಕಾರಿಗಳು)
3) ಯೋಜನಾ ಸಮನ್ವಯಾಧಿಕಾರಿಗಳ ವೃಂದ
   (ಅ) 02 (ರಾಜ್ಯ ಸರ್ಕಾರದ ಅನ್ಯ ಇಲಾಖೆಯ ಅಧಿಕಾರಿಗಳು)
   (ಆ) 01 (ಭಾರತ ಸರ್ಕಾರದಿಂದ ನಿಯೋಜಿತರಾಗಿರುವರು)

ಆ)	1) ಶಿಕ್ಷಣ ಇಲಾಖೆ	05 ಅಧಿಕಾರಿಗಳು
	2) ಬಾಡಿಗೆ ನಿಯಂತ್ರಣ ಇಲಾಖೆ	01 ಅಧಿಕಾರಿಗಳು
	3) ಕೆ.ಎಸ್.ಎಫ್.ಸಿ. ಇಲಾಖೆ	02 ಅಧಿಕಾರಿಗಳು
	4) ಕೃಷಿ ಇಲಾಖೆ	01 ಅಧಿಕಾರಿಗಳು
	5) ಹಿಂದುಳಿದ ವರ್ಗಗಳ ಇಲಾಖೆ	03 ಅಧಿಕಾರಿಗಳು
	6) ಅಂಕಿ ಅಂಶಗಳ ಇಲಾಖೆ	01 ಅಧಿಕಾರಿಗಳು
	7) ಪತ್ರಾಗಾರ ಇಲಾಖೆ	01 ಅಧಿಕಾರಿಗಳು
	ಒಟ್ಟು	**14** ಅಧಿಕಾರಿಗಳು

ಇ) ಎರವಲು ಸೇವೆ ಅವಶ್ಯಕತೆ ಇಲ್ಲ. ಆದಾಗ್ಯೂ ಹುದ್ದೆಗಳು ಖಾಲಿ ಇರುವ ಪ್ರಯುಕ್ತ ಇಲಾಖಾ ಕಾರ್ಯಕ್ರಮಗಳ ಅನುಷ್ಟಾನ ದೃಷ್ಟಿಯಿಂದ ತಾತ್ಕಾಲಿಕವಾಗಿ ನಿಯೋಜಿಸಿದೆ.

ಈ) ಹೌದು ಇಲಾಖೆಯಲ್ಲಿ ನೇರ ನೇಮಕಾತಿಯ ಹುದ್ದೆಗಳ ಕೊರತೆ ಇರುವುದರಿಂದ ಅನ್ಯ ಇಲಾಖೆಯಲ್ಲಿನ ಅಧಿಕಾರಿಗಳನ್ನು ನಿಯೋಜಿಸಿದೆ.

ಉ) ನೇರ ನೇಮಕಾತಿಯ 19 ಹುದ್ದೆಗಳ ಕೊರತೆ ಇದೆ.

ಊ) ಕೊರತೆ ಇರುವ ಎಲ್ಲಾ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಭರ್ತಿ ಮಾಡಬೇಕಾಗಿರುತ್ತದೆ.

5106 (6110) ಶ್ರೀ ಬಸವರಾಜು ಹೆಚ್. ಡಿ. (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನ ಬಾಳಗೋಡು ಗ್ರಾಮದಲ್ಲಿ ಗಿರಿಜನರ ಮಕ್ಕಳಿಗಾಗಿ ನಿರ್ಮಿಸಿರುವ ಏಕಲವ್ಯ ಮಾದರಿ ನಿವಾಸ ಶಾಲೆಯ ಕಟ್ಟಡದ ಕಾಮಗಾರಿ ಕಳಪೆ ಆಗಿದ್ದು, ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕಾಮಗಾರಿ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ತುರ್ತಾಗಿ ಮಕ್ಕಳನ್ನು ಕಳಪೆ ಕಾಮಗಾರಿಯ ಕಟ್ಟಡಕ್ಕೆ ಸ್ಥಳಾಂತರಿಸಲು ಕಾರಣಗಳೇನು (ವಿವರ ನೀಡುವುದು)?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಕಳಪೆ ಕಾಮಗಾರಿಯಾಗಿರುವುದಿಲ್ಲ. ಕಟ್ಟಡ ಕಾಮಗಾರಿಗಳು ಎಲ್ಲಾ ರೀತಿಯಲ್ಲಿ ಪೂರ್ಣಗೊಂಡಿದ್ದರಿಂದ ವಸತಿ ಶಾಲೆಯನ್ನು ಸ್ಥಳಾಂತರಿಸಲಾಗಿದೆ.